ಕರ್ನಾಟಕ ಸರ್ಕಾರ

ನಂ.ಗ್ರಾಅಪ/29/ಗ್ರಾಪಂಕಾ/2010

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 09.03.2010.

## ಸುತ್ತೋಲೆ

**ವಿಷಯ:** ಇಂಧನ ಸಂರಕ್ಷಣೆ/ಉಳಿತಾಯ ಕುರಿತು.

*-*-*-*-*

ರಾಜ್ಯದ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಬೀದಿ ಧೀಪಗಳು ಹಗಲು ಹೊತ್ತಿನಲ್ಲಿ ಉರಿಯುತ್ತಿದ್ದು, ಸಂಬಂಧಪಟ್ಟವರು ನಿಗದಿತ ಸಮಯದಲ್ಲಿ ಆರಿಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇದರಿಂದ ಇಂಧನ ಸಂರಕ್ಷಣೆ/ಉಳಿತಾಯ ಆಗದೇ ಬೇಸಿಗೆ ಸಮಯದಲ್ಲಿ ವಿದ್ಯುತ್ ಕ್ಷಾಮ ಎದುರಿಸಬೇಕಾದ ಸಂದರ್ಭ ಉಂಟಾಗುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು ಮತ್ತು ಗ್ರಾಮ ಪಂಚಾಯಿತಿಗಳು ಈ ಕೆಳಕಂಡಂತೆ ಕ್ರಮ ವಹಿಸುವಂತೆ ಸೂಚಿಸಿದೆ.

1. ಎಲ್ಲಾ ಬೀದಿ ದೀಪಗಳ ಸ್ಥಾವರಗಳಿಗೆ ಟೈಮರ್‌ಗಳನ್ನು ಅಳವಡಿಸಿ ಅವಶ್ಯಕತೆ ಇರುವ ನಿಗದಿತ ಸಮಯದಲ್ಲಿ ಮಾತ್ರ ಬೀದಿ ದೀಪಗಳು ಉರಿಯುವಂತೆ ನೋಡಿಕೊಳ್ಳುವುದು.
2. ಸೌರ ವಿದ್ಯುಚ್ಛಕ್ತಿ ಆಧಾರಿತ ಸಲಕರಣೆಗಳನ್ನು ಬಳಸಲು ಉತ್ತೇಜನ ನೀಡುವುದು.
3. ನಗರ/ಗ್ರಾಮೀಣ ಪ್ರದೇಶಗಳಲ್ಲಿ ಜಾಹೀರಾತುಗಳಿಗೆ, ಸಾರ್ವಜನಿಕ ಸಭೆ-ಸಮಾರಂಭಗಳಿಗೆ ವಿದ್ಯುತ್‌ನ್ನು ಮಿತವಾಗಿ ಉಪಯೋಗಿಸುವಂತೆ ಸೂಚಿಸುವುದು.
4. ಅಲಂಕಾರಿಕ ದೀಪಗಳ ಬಳಕೆಯನ್ನು ಗಣನೀಯವಾಗಿ ತಪ್ಪಿಸುವುದು.
5. ವಾಣಿಜ್ಯ ಮತ್ತು ಕಛೇರಿಗಳಲ್ಲಿ ಅಗತ್ಯವಿದ್ದಲ್ಲಿ ಮಾತ್ರ ಎ.ಸಿ., ಫ್ಯಾನ್ ಮತ್ತು ಲೈಟ್‌ಗಳನ್ನು ಬಳಸುವಂತೆ ಸೂಚಿಸುವುದು.
6. ಸಾರ್ವಜನಿಕರಲ್ಲಿ ವಿದ್ಯುತ್‌ನ್ನು ಉಳಿಸುವಂತೆ ಅರಿವು ಮೂಡಿಸಲು ವ್ಯಾಪಕ ಪ್ರಚಾರ ಕೈಗೊಳ್ಳುವುದು.

ಜಿಲ್ಲಾ ಪಂಚಾಯತ್ ಕಾರ್ಯಾಲಯ
ಉತ್ತರ ಕನ್ನಡ ಕಾರವಾರ
17 MAR 2010
ದಿನಾಂಕ: ವಿಷಯ
ಅಧಿ. ಮು.ಕಾ.

9/3/10
(ಸ್ವರ್ಣಲತ ಎಂ.ಭಂಡಾರೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಗೆ:

1. ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು.
2. * ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ಗಳು.
3. ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

*** ಈ ಸುತ್ತೋಲೆಯ ಪ್ರತಿಯನ್ನು ಎಲ್ಲಾ ಗ್ರಾಮ ಪಂಚಾಯಿತಿ ಅಧ್ಯಕ್ಷರು/ಕಾರ್ಯದರ್ಶಿಗಳಿಗೆ ಕೂಡಲೇ ಕಳುಹಿಸಿ ಕ್ರಮ ವಹಿಸುವಂತೆ ಸೂಚಿಸಿದೆ.**

ಜಿಲ್ಲಾ ಪಂಚಾಯತ್ ಕಾರ್ಯಾಲಯ
ಉತ್ತರ ಕನ್ನಡ ಕಾರವಾರ
19 MAR 2010
ದಿನಾಂಕ: ವಿಷಯ
ಅಧಿ. ಉಕಾ. ಮುಕಾ.